ಅಲ್ಲಿ ಭಿಕ್ಷುಗಳನ್ನು ಎದುರುಗೊಂಡನು. ಎಲ್ಲರೂ ಒಂದೇ ತರಹ ಕಾಣಿಸುತ್ತಿದ್ದಾರೆ! ಇವರಲ್ಲಿ ಯಾರು ತನ್ನ ಮಗ ಎಂದು ಅವನು ಯೋಚಿಸುತ್ತಿದ್ದನು. ಅಷ್ಟರಲ್ಲಿ ಸಾರಥಿ ಕಂಕ ಸಿದ್ಧಾರ್ಥ ನನ್ನು ತಕ್ಷಣವೇ ಗುರುತಿಸಿದ. "ಮಹಾಪ್ರಭು! ಆ ಮನೆಯ ಮುಂದೆ ಭಿಕ್ಷಾಪಾತ್ರೆಯನ್ನು ಹಿಡಿದು ನಿಂತಿದ್ದಾರೆ ನೋಡಿ, ಎಂಥ ತೇಜಸ್ಸು!" ಎಂದ.

ಆಶ್ಚರ್ಯದಿಂದ ರಾಜನು ಕಾವಿ ಧರಿಸಿದ್ದ ಭಿಕ್ಷುವೊಬ್ಬ ನನ್ನು ಕಂಡ. ಒಂದು ಗುಡಿಸಿಲಿನ ಮುಂದೆ ಅವನು ತನ್ನ ಭಿಕ್ಷಾಪಾತ್ರೆಯೊಡನೆ ನಿಂತಿದ್ದಾನೆ. ಪ್ರಶಾಂತವಾಗಿ, ಏಕಾಗ್ರತೆಯಿಂದ ಭಿಕ್ಷೆ ಬೇಡುತ್ತಿದ್ದಾನೆ. ಆಕ್ಷಣಕ್ಕೆ ಅದೇ ಮುಖ್ಯಕಾರ್ಯವೆನ್ನುವಂತೆ ನಿಂತಿದ್ದಾನೆ. ದೃಷ್ಟಿ ಅತ್ತಿತ್ತ ಹರಿಯುತ್ತಿಲ್ಲ. ಅಷ್ಟರಲ್ಲಿ ಆ ಗುಡಿಸಲಿನಿಂದ ಚಿಂದಿಬಟ್ಟೆಯನ್ನುಟ್ಟ ಹೆಂಗಸೊಬ್ಬಳು ಹೊರಬಂದು, ಒಂದು ಚಿಕ್ಕ ಆಲೂಗಡ್ಡೆಯನ್ನು ಅವನ ಭಿಕ್ಷಾಪಾತ್ರೆಯಲ್ಲಿ ಹಾಕಿದಳು. ಶುದ್ಧೋಧನನಿಗೆ ಇದನ್ನು ಸಹಿಸಲಾಗಲಿಲ್ಲ. ಈ ಅಪಮಾನವನ್ನು ಸಹಿಸುವುದಕ್ಕಿಂತ ಭೂಮಿ ಬಂದು ತನ್ನನ್ನು ನುಂಗಬಾರದೇ ಎನಿಸಿತು ಅವನಿಗೆ. ಬುದ್ಧನೋ, ಗೌರವದಿಂದ ಆ ಭಿಕ್ಷೆಯನ್ನು ಸ್ವೀಕರಿಸಿ, ಆ ತಾಯಿಯನ್ನು ಹರಸಿ ಮುಂದಿನ ಮನೆಯತ್ತ ನಡೆದನು.

ರಾಜನು ರಥವನ್ನು ಅಲ್ಲೇ ನಿಲ್ಲಿಸಲು ತಿಳಿಸಿ, ರಥದಿಂದ ಇಳಿದು ಬುದ್ಧನೆಡೆಗೆ ನಡೆಯತೊಡಗಿದನು. ಆಗ ಬುದ್ಧನು ತನ್ನ ತಂದೆ ತನ್ನೆಡೆಗೆ ಬರುತ್ತಿರುವುದನ್ನು ನೋಡಿದನು. ತಾನೂ ಅವನತ್ತ ಹೆಜ್ಜೆ ಹಾಕತೊಡಗಿದನು. ಆದರೆ ರಾಜನದು ಆತುರದ ನಡೆಯಾಗಿದ್ದರೆ, ಬುದ್ಧನದು ಮೃದುವಾದ, ಶಾಂತವಾದ ನಡಿಗೆಯಾಗಿತ್ತು. ಇಬ್ಬರೂ ಒಬ್ಬರನ್ನೊಬ್ಬರು ದಿಟ್ಟಿಸಿ ನೋಡಿದರು.

"ಸಿದ್ಧಾರ್ಥ!"

"ತಂದೆಯೇ!"

ನಾಗಸಮಲನೆಂಬುವವನು ವೇಗವಾಗಿ ಬಂದನು. ಬುದ್ಧನ ಕೈಯಲ್ಲಿದ್ದ ಭಿಕ್ಷಾಪಾತ್ರೆಯನ್ನು ತೆಗೆದುಕೊಂಡನು. ಇದರಿಂದ ಬುದ್ಧನು ತನ್ನ ತಂದೆಯ ಕೈಗಳನ್ನು, ತನ್ನ ಕೈಗಳಲ್ಲಿ ತೆಗೆದುಕೊಳ್ಳಲು ಸಾಧ್ಯವಾಯಿತು. ವೃದ್ಧರಾಜನ ಸುಕ್ಕುಸುಕ್ಕಾದ ಕೆನ್ನೆಗಳ ಮೇಲೆ ಕಂಬನಿಯ ಧಾರೆ ಹರಿಯಿತು. ಬುದ್ಧನು ಪ್ರೀತಿತುಂಬಿದ ತನ್ನ ಕಣ್ಣುಗಳಿಂದ ತನ್ನ ತಂದೆಯನ್ನು ದಿಟ್ಟಿಸಿ ನೋಡಿದನು. "ಇವನು ಹಿಂದಿನ ಸಿದ್ಧಾರ್ಥನಲ್ಲ; ಸಿಂಹಾಸನವನ್ನು ಏರಿದ ರಾಜಕುಮಾರನಲ್ಲ; ಅದಕ್ಕಿಂತಲೂ ಹೆಚ್ಚಿನ ಗೌರವಾನ್ವಿತವಾದ ಆಧ್ಯಾತ್ಮಿಕ ಗುರುಪಟ್ಟವನ್ನೇ ಏರಿರುವವನು" ಎಂದು ತಂದೆಯು ಅರಿತುಕೊಂಡನು. ಮಗನೆಂದು ಆಲಿಂಗಿಸಿಕೊಳ್ಳಬೇಕೆಂದು ಭಾವಿಸಿದರೂ, ಅದು ಸರಿಯಲ್ಲವೆಂದು ಸುಮ್ಮನಾದನು. ಅದಕ್ಕೆ ಬದಲಾಗಿ, ತನ್ನೆರಡೂ ಕೈಗಳನ್ನು ಜೋಡಿಸಿ, ಬಾಗಿ ನಮಸ್ಕರಿಸಿದನು. ಬುದ್ಧನಾದರೋ ನಿರ್ವಿಕಾರಭಾವದಿಂದ, ಶಾಂತಚಿತ್ತದಿಂದ, ತಂದೆಯ ಎರಡೂ ಕೈಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ನಂತರ ತನ್ನ ಹಿಂದೆ ನಿಂತಿದ್ದ ಸಾರಿಪುತ್ರನೆಡೆಗೆ ತಿರುಗಿ, "ಭಿಕ್ಷುಗಳೆಲ್ಲರೂ ಭಿಕ್ಷೆ ಬೇಡಿ ಮುಗಿಸಿದ್ದರೆ, ಉದ್ಯಾನವನಕ್ಕೆ ಹಿಂತಿರುಗಲಿ. ನಾನು ಮತ್ತು ನಾಗಸಮಲ ಇಂದು ಅರಮನೆಯಲ್ಲಿ ಭಿಕ್ಷೆ ಸ್ವೀಕರಿಸಿ, ಮಧ್ಯಾಹ್ನದ ನಂತರ ಬರುತ್ತೇವೆ" ಎಂದನು.

ರಾಜನು ಧೈರ್ಯಮಾಡಿ, "ಮಗನೇ, ನೀನು ನೇರವಾಗಿ ಅರಮನೆಗೆ ಬಂದು, ಮನೆಯವರ ಭೇಟಿ ಮಾಡುತ್ತೀಯೆಂದು ಎಣಿಸಿದ್ದೆವು. ನೀನು ನಗರದಲ್ಲಿ ಭಿಕ್ಷಾಟನೆ ಮಾಡುವೆಯಂದು ನಾವು ಕಿಂಚಿತ್ತೂ ಎಣಿಸಿರಲಿಲ್ಲ" ಎಂದನು. ಅದಕ್ಕೆ ಬುದ್ಧನು ನಸುನಕ್ಕು ಹೀಗೆ ಹೇಳಿದನು: "ಅಪ್ಪಾ, ನಾನು ಒಂಟಿಯಾಗಿ ಬಂದಿಲ್ಲ. ನನ್ನೊಡನೆ ಭಿಕ್ಷುಗಳ ದೊಡ್ಡ ಪರಿವಾರವೇ ಇದೆ. ಅವರೊಡನೆ ನಾನೂ ಭಿಕ್ಷೆ ಬೇಡುವೆ." ಅದಕ್ಕೆ ರಾಜನು, "ಆದರೆ, ಇಂಥ ಬಡ ಗುಡಿಸಿಲಿನಲ್ಲಿ ಭಿಕ್ಷೆ ಬೇಡುವ ಆವಶ್ಯಕತೆ ಯಾದರೂ ಏನಿದೆ? ಶಾಕ್ಯ ರಾಜಮನೆತನಕ್ಕೆ ಸೇರಿದ ಯಾವನೂ ಇಂಥ ಕೆಲಸ ಇದುವರೆಗೆ ಮಾಡಿಲ್ಲ" ಎಂದನು. ಅದಕ್ಕೆ ಬುದ್ಧ ಹೀಗೆ ಉತ್ತರಿಸಿದ: "ಈ ಮನೆತನದಲ್ಲಿ ಈ ಹಿಂದೆ ಯಾರೂ ಭಿಕ್ಷುಗಳಾಗಿರಲಿಲ್ಲ. ಭಿಕ್ಷೆ ಬೇಡುವುದು ಭಿಕ್ಷುಗಳ ನಿಯಮ. ಇದರಿಂದ ಎಲ್ಲರೂ ಸಮಾನರೆಂಬ ಭಾವನೆ ಮನಸ್ಸಿನಲ್ಲಿ ಬೇರೂರುತ್ತದೆ. ಇಂದು ನಾನು ಆ ಗುಡಿಸಿಲಿನಲ್ಲಿ ಪಡೆದ ಚಿಕ್ಕ ಆಲೂಗಡ್ಡೆಗೂ, ಅರಮನೆಯಲ್ಲಿ ಪಡೆಯುವ ಮೃಷ್ಟಾನ್ನಕ್ಕೂ ನನಗೆ ಅಂತಹ ಏನೂ ವ್ಯತ್ಯಾಸ ಕಾಣಬರಲಿಲ್ಲ. ಬಡವ ಶ್ರೀಮಂತರೆಂಬ ತಾರತಮ್ಯವನ್ನು ಭಿಕ್ಷುವಾದವನು ಮಾತ್ರ ಮೀರಬಲ್ಲ. ನಮ್ಮ ಮಾರ್ಗದಲ್ಲಿ ಎಲ್ಲರೂ ಸಮಾನರೇ. ಎಷ್ಟೇ ಬಡವನಾಗಿರಲಿ, ಪ್ರತಿಯೊಬ್ಬನೂ ಮೋಕ್ಷಕ್ಕೆ ಅರ್ಹನಾದವನು; ಜ್ಞಾನವನ್ನು ಪಡೆಯಬಲ್ಲವನು. ಭಿಕ್ಷೆ ಬೇಡುವುದು ಆತ್ಮಗೌರವಕ್ಕೆ ಧಕ್ಕೆ ತರುವಂತಹ ವಿಷಯವೇನಲ್ಲ. ಅದು ಎಲ್ಲರೊಳಗಿನ ಆತ್ಮಗೌರವವನ್ನು ಗುರುತಿಸಲು ಸಹಾಯ ಮಾಡುವ ಸಾಧನ."

ರಾಜ ಶುದ್ಧೋಧನನು ಅಚ್ಚರಿಯಿಂದ ಬುದ್ಧನ ಮಾತುಗಳನ್ನು ಆಲಿಸುತ್ತಿದ್ದನು. ಸಿದ್ಧಾರ್ಥ ಹುಟ್ಟಿದಾಗ, ತಾನು ಯಾವ ಭವಿಷ್ಯವಾಣಿಯನ್ನು ಜ್ಯೋತಿಷಿಗಳಿಂದ ಕೇಳಿತಿಳಿದನೋ, ಅದು ಈಗ ಸತ್ಯವಾಯಿತು ಎಂದು ಭಾವಿಸಿದನು. ತನ್ನ ಪ್ರೀತಿಯ ಕುವರನಾದ ಸಿದ್ಧಾರ್ಥನು ಈಗ ಇಡೀ ಜಗತ್ತನ್ನೇ ಬೆಳಗುವ ಜಗದ್ಗುರುವಾದ ಬುದ್ಧನಾಗಿದ್ದಾನೆ ಎಂದು ಆಲೋಚಿಸಿದನು.

ರಾಜನು ತನ್ನ ಮಗನ ಕೈಯನ್ನು ಹಿಡಿದುಕೊಂಡು, ಅರಮನೆಯತ್ತ ತೆರಳಿದ. ನಾಗಸಮಲ ಅವರಿಬ್ಬರನ್ನೂ ಹಿಂಬಾಲಿಸಿದ.

(ಮುಂದುವರಿಯುವುದು)